

# ನಮ್ಮದಲ್ಲದ್ದು ನಮ್ಮದಲ್ಲ

■ ಶೇಖರಯ್ಯ ಟಿ.ಎಚ್.ಎಂ.
ಕಲೆ: ಸಂತೋಷ್ ಸಸಿಹಿತ್ಲು

ಅಂದು ಭಾನುವಾರ. ಊರಲ್ಲಿ ವಾರದ ಸಂತೆ ನಡೆದಿತ್ತು. ಸುತ್ತ ಹತ್ತಾರು ಹಳ್ಳಿಯ ರೈತರು ತಾವು ಬೆಳೆದ ತರಕಾರಿಗಳನ್ನು ಮಾರಲು ಬಂದಿದ್ದರು. ಹಲವು ವ್ಯಾಪಾರಿಗಳು, ದಲ್ಲಾಳಿಗಳು, ರೈತರಿಂದ ತರಕಾರಿ ಖರೀದಿಸಿ ವ್ಯಾಪಾರ ಮಾಡಲು ನೆರೆದಿದ್ದರು. ಬೆಳಗಾಗುವ ಹೊತ್ತಿಗೆ ಒಪ್ಪ ಓರಣವಾಗಿ ತರಕಾರಿಗಳನ್ನು ಜೋಡಿಸಿ ಸಂತೆ ಆರಂಭವಾಗಿತ್ತು. ರಜಾ ಸಮಯವಾದ್ದರಿಂದ ತಂದೆಯ ಜೊತೆಗೆ ಸುಹಾಸನೂ ಸಂತೆಗೆ ಹೋಗಿದ್ದ. ತಮಗೆ ಬೇಕಾದ ತರಕಾರಿಗಳನ್ನು ತೆಗೆದುಕೊಂಡ ಸುಹಾಸನ ತಂದೆ, ಸೊಪ್ಪು ಖರೀದಿಸಲು ನಡೆದರು. ಸೊಪ್ಪು ಮಾರುವ ಬಳಿ ಜನಜಂಗುಳಿ ಸೇರಿತ್ತು. ಅಪ್ಪ ಸೊಪ್ಪು ಖರೀದಿಯಲ್ಲಿ ನಿರತರಾಗಿದ್ದರು. ಸುಹಾಸ ಅಲ್ಲಿನ ವ್ಯವಹಾರವನ್ನು ಕಣ್ಣರಳಿಸಿ ನೋಡುತ್ತಿದ್ದ. ಹೀಗೆ ನೋಡುತ್ತಿದ್ದ ಅವನಿಗೆ ಜನರ ಕಾಲ ಸಂದಿಯಲ್ಲಿ ಬಿದ್ದದ್ದ ಐದು ನೂರು ರೂಪಾಯಿಗಳ ನೋಟು ಕಂಡಂತೆ ಆಯಿತು. ಹೌದೋ ಅಲ್ಲವೋ ಅಂತ ಮತ್ತೆರಡು ಬಾರಿ ಸೂಕ್ಷ್ಮವಾಗಿ ನೋಡಿದ. ಖಂಡಿತ ಅದು ಐದು ನೂರು ರೂಪಾಯಿ ಎಂಬುದು ಅವನಿಗೆ ಖಾತ್ರಿ ಆಯ್ತು. ನೋಟಿನ ಹತ್ತಿರ ತೆರಳಿದ ಸುಹಾಸ ಅತ್ತಿತ್ತ ನೋಡಿ ಯಾರೂ ನೋಡದಿರುವುದನ್ನು ಖಾತ್ರಿ ಮಾಡಿಕೊಂಡು ಜೇಬಿನಲ್ಲಿಟ್ಟುಕೊಂಡ.

ಸೊಪ್ಪು ಮತ್ತು ತರಕಾರಿ ಖರೀದಿಯೆಲ್ಲ ಮುಗಿದ ಮೇಲೆ ಮನೆಯತ್ತ ಸಾಗುತ್ತಿರುವಾಗ ದಾರಿ ಮಧ್ಯದಲ್ಲಿಯೇ ಐದು ನೂರು ರೂಪಾಯಿ ಸಿಕ್ಕ ವಿಷಯವನ್ನು ತಡೆಯಲಾಗದ ಸುಹಾಸನು, ‘ಅಪ್ಪ ನನಗೆ ಐದು ನೂರು ರೂಪಾಯಿ ಸಿಕ್ಕಿದೆ, ನೋಡಿಲ್ಲಿ’ ಅಂತ ತನ್ನ ಜೇಬಿನಿಂದ ನೋಟನ್ನು ತೆಗೆದು ಅಪ್ಪನಿಗೆ ತೋರಿಸಿದ. ತಕ್ಷಣವೇ ಎಚ್ಚೆತ್ತುಕೊಂಡ ಅವರಪ್ಪ, ‘ಅಯ್ಯೋ ದಡ್ಡ ಅದನ್ನು ಸಂತೆಯಲ್ಲಿಯೇ ಹೇಳಿದ್ದರೆ, ಅಲ್ಲೇ ಯಾರಾದರೂ ಉದುರಿಸಿಕೊಂಡು ಹುಡುಕುತ್ತಿರುವವರು ಕಾಣಿಸುತ್ತಿದ್ದರು. ಅದನ್ನು ಅವರಿಗೆ ಕೊಟ್ಟು ಬರಬಹುದಿತ್ತು’ ಎಂದರು. ‘ಇರ್ಲಿ ಬಿಡಪ್ಪ ಅಷ್ಟು ಜನರಲ್ಲಿ ಕಳೆದುಕೊಂಡವರನ್ನು ಹುಡುಕುವುದಕ್ಕೆ ಆಗುತ್ತಾ?’ ಅಂತ ಸುಹಾಸ ಅಂದ. ಆಗ ‘ಹಾಗೆಲ್ಲ ಅನ್ನಬಾರದು ಕಂದ. ಪಾಪ ಯಾರೋ ಕಷ್ಟಪಟ್ಟು ದುಡಿದ ಹಣವದು. ಅಚಾನಕ್ಕಾಗಿ ಬೀಳಿಸಿಕೊಂಡಿದ್ದಾರೆ. ಈಗಲೇ ವಾಪಸ್ ಹೋಗಿ, ಹಣ ಸಿಕ್ಕ ಜಾಗದಲ್ಲಿ ಕಾಯೋಣ. ಹಣ ಕಳೆದುಕೊಂಡವರು ಕಣ್ಣಿಗೆ ಬಿದ್ದರೂ ಬೀಳಬಹುದು. ಅವರಿಗೆ ಹಿಂದಿರುಗಿಸೋಣ ಬಾ’ ಅಂದರು. ಇಬ್ಬರೂ ಪುನಃ ಸಂತೆಯ ಕಡೆಗೆ ನಡೆದರು. ಹಣ ಸಿಕ್ಕ ಜಾಗದಲ್ಲಿ ಹತ್ತಾರು ನಿಮಿಷ ಕಾದರು. ಹಣ ಕಳೆದುಕೊಂಡವರು ಅಲ್ಲಿ ಕಾಣಲೇ ಇಲ್ಲ. ಏನು ಮಾಡುವುದು ಎಂದು ಯೋಚಿಸುತ್ತಿರುವಾಗ ಅಲ್ಲಿ ಪೊಲೀಸರೊಬ್ಬರು ಸುಹಾಸನ ಕಣ್ಣಿಗೆ ಬಿದ್ದರು.

‘ಅಪ್ಪಾಜಿ ಅಲ್ಲಿ ಪೊಲೀಸ್ ಸಾಹೇಬ್ರು ಒಬ್ಬರು ನಿಂತಿದ್ದಾರೆ. ಅವರ ಬಳಿ ಮೈಕ್ ಇದೆ. ಅವರಿಗೆ ಈ ಹಣವನ್ನು ಕೊಟ್ಟು, ಐದುನೂರು ರೂಪಾಯಿ ಹಣ ಸಿಕ್ಕಿದೆ. ಯಾರಾದರೂ ಕಳೆದುಕೊಂಡಿದ್ದರೆ, ಪೊಲೀಸ್ ವಾಹನದ ಹತ್ತಿರ ಬಂದು ಪಡೆದುಕೊಳ್ಳಿ’ ಎಂದು ಅನೌನ್ಸ್ ಮಾಡಿಸೋಣ ಎಂದ. ಅಪ್ಪ ಮತ್ತು ಮಗ ಸೀದಾ ಪೊಲೀಸ್ ವಾಹನದ ಬಳಿ ತೆರಳಿ ಇದ್ದ ವಿಷಯವನ್ನೆಲ್ಲ ತಿಳಿಸಿದರು. ತಕ್ಷಣವೇ ಪೊಲೀಸರು ಮೈಕಿನಲ್ಲಿ ವಿಷಯವನ್ನು ಘೋಷಣೆ ಮಾಡಿದರು. ಜನ ತಾವೇನೂ ರೊಕ್ಕ ಕಳೆದುಕೊಂಡಿಲ್ಲ ಅಂತ ತಮ್ಮ ತಮ್ಮ ವ್ಯಾಪಾರದಲ್ಲಿ ಮಗ್ನರಾಗಿದ್ದರು. ಒಂದೆರಡು